ಮಾಡಿದ್ದು ಅದು ಅಪ್ರೂವ್ ಆಗಿ ಬಂದುಬಿಟ್ಟಿದೆ. ರಿಜಿಸ್ಟ್ರೇಷನ್ ಸಮಯದಲ್ಲಿ ಹೆಸರು ತಪ್ಪಾಗಿ ಇರುವುದರಿಂದ ಅದನ್ನು ರಿಜಿಸ್ಟ್ರೇಷನ್ ಮಾಡಿಸುವುದಕ್ಕಾಗುತ್ತಿಲ್ಲ. ಆ ಬದಲಾವಣೆಗಾಗಿ ಒಂದು ಅವಕಾಶವನ್ನು ಮಾಡಿಕೊಡಬೇಕು, ಕೆಲವೊಂದು ಅನರ್ಹರನ್ನು ಪಟ್ಟಿಯಲ್ಲಿ ಸೇರಿಸಿಬಿಟ್ಟಿದ್ದಾರೆ, ಸುವ್ಯವಸ್ಥಿತವಾಗಿ ಆ ಮನೆಯಲ್ಲಿ ಇರುವಂಥವರಿಗೆ ಹೆಚ್ಚುವರಿ ಮನೆಗಳು ಬಂದುಬಿಟ್ಟಿವೆ. ಆ ಹೆಸರುಗಳನ್ನು ಬದಲಾಯಿಸಿ ಹೊಸ ವಸತಿಹೀನರಿಗೆ ಮನೆಗಳನ್ನು ಕಟ್ಟಿ ಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಲು ಒಂದು ಬದಲಾವಣೆಯನ್ನು ಮಾಡಲಿಕ್ಕೆ ಸರ್ಕಾರ ಒಂದು ಆದೇಶ ಮಾಡಬೇಕೆಂದು ನಾನು ತಮ್ಮ ಮೂಲಕವಾಗಿ ಕೇಳುತ್ತೇನೆ. ಮನೆಗಳನ್ನು ಈಗಾಗಲೇ ಅರ್ಧಭಾಗವನ್ನು ಕಟ್ಟಿದ್ದಾರೆ ಅದಕ್ಕೆ ಇನ್ನುವರೆಗೆ ಬಿಲ್ ಬಂದಿಲ್ಲವೆಂದು ಆ ಬಡಪಾಯಿಗಳು ಕಛೇರಿಗೆ ಅಲೆದು ಅಲೆದು ಸಾಕಷ್ಟು ದುಡ್ಡನ್ನು ಕಳೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಆ ಹಣವನ್ನು ಬಿಡುಗಡೆ ಮಾಡಿ ಆ ಫಲಾನುಭವಿಗಳಿಗೆ ಆದಷ್ಟು ಬೇಗನೆ ಹಣ ಪಾವತಿ ಮಾಡಬೇಕೆಂದು ಸರ್ಕಾರಕ್ಕೆ ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಬೇರೊಬ್ಬ ಶಾಸಕರು ಈ ವಿಷಯವಾಗಿ ಎತ್ತಿರುವ ವಿಷಯಕ್ಕೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಅನರ್ಹ ಫಲಾನುಭವಿಗಳು ಇದ್ದಾರೆ ಹೆಸರಿನಲ್ಲಿ ಬದಲಾವಣೆಗಳಾಗಿದ್ದರೆ ಅಲ್ಲಿರುವಂಥ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಅಥವಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಮಟ್ಟದಲ್ಲಿ ಆ ಬದಲಾವಣೆಯನ್ನು ತರತಕ್ಕಂಥ ಅಧಿಕಾರ ಅಂತರ್ಗತವಾಗಿ ಅವರಿಗಿದೆ. ಅದನ್ನು ಅವರು ಪ್ರಾಯಶಃ ಉಪಯೋಗಿಸಿರಲಿಕ್ಕಿಲ್ಲ, ಅದನ್ನು ತಾವು ಅವರ ಗಮನಕ್ಕೆ ತಂದು ಅದನ್ನು ತಾವು ಮಾಡಿ, ಅದಕ್ಕೆ ಮತ್ತೊಂದು ಹೊಸ ಸುತ್ತೋಲೆಯನ್ನು ಮಾಡಿ ಕಳುಹಿಸುವ ಅಗತ್ಯತೆ ಇಲ್ಲ. ಆದರೆ ತಾವು ಏನು ಹೇಳಿದ್ದೀರಿ, ಎರಡನೆಯ ಕಂತಿನ ಹಣ ಏನು ಬಿಡುಗಡೆಯಾಗಿಲ್ಲವೆಂದು ಹೇಳಿದ್ದೀರಿ, ನಿರ್ದಿಷ್ಟವಾದ ಪ್ರಕರಣವನ್ನು ತಾವು ಬರೆದು ಕಳುಹಿಸಿದರೆ ನಾನು ಆ ಸಂಬಂಧಪಟ್ಟ ಅಧಿಕಾರಿಗಳಿಂದ ಸಮಜಾಯಿಷಿಯನ್ನು ಕೇಳಿ ಸರಿಯಾದ ಉತ್ತರವನ್ನು ನಾನು ತಮಗೆ ಒದಗಿಸಿಕೊಡುತ್ತೇನೆ, ಕಂತು ಬಿಡುಗಡೆಯಾಗದಿದ್ದರೆ ಅದನ್ನು ಒದಗಿಸುವಂಥ ವ್ಯವಸ್ಥೆ ಮಾಡುತ್ತೇನೆ.

ವಿಷಯ (ತ) : ಮಾಲೂರು ವಿಧಾನಸಭಾ ಕ್ಷೇತ್ರದಲ್ಲಿನ ತಾಲ್ಲೂಕು ಪಂಚಾಯಿತಿಯಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ

†ಶ್ರೀ ಎಸ್.ಎನ್. ಕೃಷ್ಣಯ್ಯಶೆಟ್ಟಿ (ಮಾಲೂರು) : ಮಾನ್ಯ ಅಧ್ಯಕ್ಷರೆ, ನನ್ನ ವಿಧಾನಸಭೆ ಕ್ಷೇತ್ರದಲ್ಲಿ ತಾಲ್ಲೂಕು ಪಂಚಾಯತಿ ಸಭೆಯಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳವರೆಗೆ ಅವ್ಯವಹಾರವಾಗಿದೆ, ಅಧಿಕಾರಿಗಳು ಆ ಹಣವನ್ನು ದುರುಪಯೋಗಪಡಿಸಿ ಕೊಂಡಿದ್ದಾರೆ ಅದರಲ್ಲಿ ಸಾಕಷ್ಟು ಅಧಿಕಾರಿಗಳು ಸಸ್ಪೆಂಡಾಗಿದ್ದಾರೆ. ಆದರೆ ಅದರ ಬಗ್ಗೆ ಮುಂದೆ ಏನಾಗಿದೆ ಎನ್ನುವುದರ ಬಗ್ಗೆ ನಮಗೆ ಒಂದು ವರದಿ ಬೇಕಾಗಿದೆ, ಈ ಒಂದು ದುರುಪಯೋಗದಿಂದ ಯಾವುದೇ ಒಂದು ರೀತಿಯ ಹಣ ತಾಲ್ಲೂಕಿಗೆ ಬರದಿರುವುದರಿಂದ ಬಹಳ ಕಷ್ಟವಾಗಿದೆ. ಅದಕ್ಕೆ ತುರ್ತಾಗಿ ಹಣವನ್ನು ಖರ್ಚು ಮಾಡಬೇಕಾಗಿದೆ, ಯಾವುದೇ ಕೆಲಸಕ್ಕೂ ಹಣ ಇಲ್ಲದಿರುವುದರಿಂದ ನಮ್ಮ ತಾಲ್ಲುಕು ಮಟ್ಟದ ಸಮಿತಿ ಒಂದು ದುಸ್ಥಿತಿಯಲ್ಲಿದೆ. ಅದರ ಜೊತೆಯಲ್ಲಿ ಹಿಂದಿನ ಸರ್ಕಾರದಲ್ಲಿ ಸಾಕಷ್ಟು ಕೆಲಸಗಳನ್ನು ಮಾಡಿದ್ದೇವೆಂದು ಸ್ಪಿಲ್‌ಒವರ್ ವರ್ಕ್‌ನಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳನ್ನು ತೋರಿಸಿದ್ದಾರೆ. ಈ ವರ್ಷ ಬಂದಿರುವ 50 ಲಕ್ಷ ರೂ.ಗಳ ಹಣ ಅದಕ್ಕೆ ಖರ್ಚು ಮಾಡುವುದಕ್ಕಾಗಿ

ತಾಲ್ಲೂಕು ಸಮಿತಿಯವರು ಹೊರಟಿದ್ದಾರೆ, ನಾನು ಇದರ ಬಗ್ಗೆ ಮನವಿಯನ್ನು ಮಾಡಿದರೂ ಸಹಿತ ಅವರು ಹಳೆಯ ಕೆಲಸಕ್ಕೆ ಆ ಹಣವನ್ನು ಬಳಸಲಿಕ್ಕೆ ಅವರು ಪ್ರಯತ್ನವನ್ನು ಪಡುತ್ತಿದ್ದಾರೆ. ಆ ಅಧಿಕಾರಿಗಳಿಂದ ಆಗಿರುವ ಅವ್ಯವಹಾರದ ಒಂದು ಕೋಟಿ ರೂ. ಗಳು. ಈ ವರ್ಷ ಬಂದಿರುವಂಥ ಹಣ, ಯಾವುದೇ ಹೊಸ ಹಣ ಇಲ್ಲದೆ, ಹೊಸದಾಗಿ ಇರುವ ತುರ್ತಾಗಿ ಕೆಲಸಗಳಿಗೆ ಹಣವಿಲ್ಲದೆ ತಾಲ್ಲೂಕು ಸಮಿತಿ ಇದೆ. ದಯವಿಟ್ಟು ಅದನ್ನು ಪರಿಶೀಲಿಸಿ ಆ ಅಧಿಕಾರಿಗಳು ಮಾಡಿರುವಂಥ ತಪ್ಪನ್ನು ಆ ಅಧಿಕಾರಿಗಳ ಮೇಲೆ ಹೊರಿಸಿ ಸರ್ಕಾರದಿಂದ ಒಂದು ಕೋಟಿ ರೂ.ಗಳನ್ನು ಬಿಡುಗಡೆ ಮಾಡಿ ತಾಲ್ಲೂಕಿನ ಅಭಿವೃದ್ಧಿ ಅನುಕೂಲ ಮಾಡಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದರ ಜೊತೆಗೆ ತಾಲ್ಲೂಕಿನ ಆಶ್ರಯ ಸಮಿತಿಯಲ್ಲಿ ಶೇಕಡಾ 60 ಪರ್ಸೆಂಟ್‌ದಷ್ಟು ಹಣ ದುರುಪಯೋಗವಾಗಿದೆ. ಮೂರು-ನಾಲ್ಕು ಮನೆಗಳು ಇದ್ದರಿಗೂ ಕೂಡ ಆಶ್ರಯ ಸಮಿತಿಯಲ್ಲಿ ಮನೆಗಳನ್ನು ಅಲಾಟ್ ಮಾಡಿದ್ದಾರೆ. ಆ ಲಿಸ್ಟ್‌ನ್ನು ಪರಿಶೀಲನೆ ಮಾಡಿ ಕ್ಯಾನ್ಸಲ್ ಮಾಡಿ ಹೊಸ ಲಿಸ್ಟ್‌ನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾಣು ತಮ್ಮಲ್ಲಿ ಮನವಿ ಮಾಡುತ್ತೇನೆ. ಅದರ ಜೊತೆಗೆ ನಮ್ಮ ಮಾಲೂರು ಮುನಿಸಿಪಾಲಿಟಿಯಲ್ಲಿ ಸುಮಾರು 1300 ಜನಕ್ಕೆ ಆಶ್ರಯ ಯೋಜನೆಯಲ್ಲಿ ಸೈಟ್ ಕೊಡುತ್ತೇವೆಂದು ಹಣವನ್ನು ತೆಗೆದುಕೊಂಡಿದ್ದಾರೆ. ಅದನ್ನು ಯಾವರೀತಿಯಾಗಿ ಮಾಡಿದ್ದಾರೆನ್ನುವ ಬಗ್ಗೆ ಅರ್ಥವಾಗುತ್ತಿಲ್ಲ. ಅದಕ್ಕಾಗಿ ತಾವು ದಯವಿಟ್ಟು ತಿಳಿಸಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಅದರ ಜೊತೆಗೆ ನವಗ್ರಾಮ ಯೋಜನೆಯಲ್ಲಿ 10 ಹಳ್ಳಿಗಳಲ್ಲಿ ಮನೆಗಳನ್ನು ಹಂಚಿದ್ದಾರೆ. ಒಂದು ಕಡೆ ಮನೆಗಳನ್ನು ಕೊಡಬೇಕಾಗುತ್ತದೆ. ದಯವಿಟ್ಟು ನಮ್ಮ ತಾಲ್ಲೂಕಿನಲ್ಲಿ ಆಗಿರುವ ಅನ್ಯಾಯಗಳಿಗೆ ಒಂದು ವ್ಯವಸ್ಥೆ ಮಾಡಬೇಕು. ಇದರಿಂದ ಜನತೆಗೆ ಬಹಳ ದ್ರೋಹವಾಗಿದೆ, ಹಣವನ್ನು ಬಿಡುಗಡೆ ಮಾಡುವುದರಿಂದ ನಮ್ಮ ತಾಲ್ಲೂಕಿನ ಅಭಿವೃದ್ಧಿಗಳಿಗೆ ಹಣ ಬೇಕಾಗಿದೆ ತಾವು ಹಣವನ್ನು ಬಿಡುಗಡೆ ಮಾಡಬೇಕೆಂದು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕ ಮಿತ್ರರಲ್ಲಿ ಅವರೇ ಎಂದು ಅಲ್ಲ, ತಪ್ಪಾಗಿ ಅವರು ಭಾವಿಸಬಾರದು, ಯಾರಾದರೂ ಸದಸ್ಯರುಗಳು ಎದ್ದುನಿಂತು ಮಾತನಾಡುವಾಗ ಅವರ ಮುಂದೆ ಹಾದು ಹೋಗಬಾರದು. ಅವರ ಹಿಂದೆ ಅಥವಾ ತಲೆಯನ್ನು ತಗ್ಗಿಸಿ ಬರಬೇಕು, ಆ ಕಾರಣಕ್ಕಾಗಿ, ದಯಮಾಡಿ ನಾಣು ಉಪದೇಶ ಮಾಡುತ್ತೀನೆಂದು ತಪ್ಪುಭಾವಿಸಬೇಡಿ, ಮುಂದೆ ತರಬೇತಿಯನ್ನು ಕೊಡುವಂಥ ವಿಚಾರದಲ್ಲಿ ಅದರ ಬಗ್ಗೆ ಹೇಳುತ್ತಾರೆ. ಅದನ್ನು ಪರಿಪಾಲಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾವು ಹಣ ದುರುಪಯೋಗ ಮಾಡಿದ್ದಾರೆಂದು ಏನು ಹೇಳಿದ್ದೀರಿ, ಅದಕ್ಕೆ ಮತ್ತೆ ಸರ್ಕಾರ ಒಂದು ಕೋಟಿ ರೂಪಾಯಿಗಳನ್ನು ಕೊಡುವುದಕ್ಕಾಗುವುದಿಲ್ಲ. ಆದರೆ ದುರುಪಯೋಗ ಮಾಡಿರುವ ಬಗ್ಗೆ ನಿರ್ದಿಷ್ಟವಾದ ಪ್ರಕರಣಗಳ ಬಗ್ಗೆ ಸರ್ಕಾರದ ಗಮನಕ್ಕೆ ತಂದರೆ ಅವರ ಮೇಲೆ ಕಾನೂನಿನ ಪ್ರಕಾರವಾಗಿ ಕೈಗೊಳ್ಳುವುದರ ಜೊತೆಗೆ ಆ ಹಣವನ್ನು ವಸೂಲಾತಿಯಲ್ಲಿಯೂ ಕ್ರಮ ಕೈಗೊಳ್ಳುತ್ತೇವೆ. ಈಗಾಗಲೇ ಸದನದಲ್ಲಿ ಉತ್ತರವನ್ನು ಕೊಟ್ಟಿದ್ದೇವೆ, ಅನರ್ಹ ಫಲಾನುಭವಿಗಳು ಯಾರ್ಯಾರಿದ್ದಾರೆ ಅವರನ್ನು ತೆಗೆದು ಹಾಕಬೇಕು, ಯಾವ ಲಿಸ್ಟ್ ಹಿಂದೆ ಒಪ್ಪಿಗೆಯಾಗಿದೆ ಆ ಒಪ್ಪಿಗೆಯ ಯಾದಿಯನ್ನು ಪುನರ್ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಸರ್ಕಾರಗಳು ನಿರಂತರ. ಆ ಸರ್ಕಾರ ಈ ಸರ್ಕಾರವೆಂದು ಹೇಳಿ, ವಾಡಿಕೆಯಲ್ಲಿ ಇದೊಂದು ಸಮ್ಮಿಶ್ರ ಸರ್ಕಾರವೆಂದು ಅನ್ನುತ್ತೇವೆ ಅದು ಭಾರತೀಯ ಜನತಾ ಪಕ್ಷ, ಅಥವಾ ಕಾಂಗ್ರೆಸ್ ಪಕ್ಷದ ಸರ್ಕಾರ ಅನ್ನುತ್ತೇವೆ ಆದರೆ ಅದು ಕನ್ನಿಡಿಗರ ಸರ್ಕಾರ. ನಿರಂತರವಾಗಿ ನಡೆಯುತ್ತಿರುತ್ತದೆ. ಆ ಕಾರಣಕ್ಕಾಗಿ ಈ ಯೋಜನೆಗಳು ಏನು

ಬಂದಿರುತ್ತವೆ ಆ ಯೋಜನೆಗಳನ್ನು ಮುಂದುವರೆಸಿಕೊಂಡು ಹೋಗಬೇಕಾಗಿರುವಂಥದ್ದು ನಮ್ಮ ಜವಾಬ್ದಾರಿ. ಅನರ್ಹ ಫಲಾನುಭವಿಗಳು ಯಾದಿ ಏನಾದರೂ ತಯಾರಾಗಿದ್ದರೆ ಅದನ್ನು ರದ್ದುಮಾಡುವಂಥ ಕೆಲಸವನ್ನು ಮಾಡುತ್ತೇವೆ. ಹೆಚ್ಚುವರಿ ಮನೆಗಳು ಬೇಕು ಎಂದು ಕೇಳಿದ್ದೀರಿ. ಅದನ್ನು ಒದಗಿಸಿಕೊಡುವಂತಹ ಪ್ರಯತ್ನವನ್ನು ಮಾಡುತ್ತೇವೆ. ನವಗ್ರಾಮ ನಿರ್ಮಾಣ ಮಾಡುವಂಥದ್ದು ಏನಿದೆ ಕನಿಷ್ಟ 20 ಗುಂಪು ಮನೆಗಳು ಇರಬೇಕು. 20 ಗುಂಪು ಮನೆಗಳು ಇದರಿದ್ದರೆ ಅದು ನವಗ್ರಾಮ ಆಗುವುದಿಲ್ಲ; ಅದಕ್ಕೆ ಯಾರೂ ಒಪ್ಪಿಗೆಯನ್ನು ಕೊಟ್ಟಿರುವುದಿಲ್ಲ. ಆದ್ದರಿಂದ ಅಂತಹ ಪ್ರಕರಣಗಳು ಏನಾದರೂ ಇದ್ದಾರೆ ಕಾನೂನುಬಾಹಿರವಾದ ಪ್ರಕರಣಗಳು ಇದ್ದರೂ ಕೂಡ ನಾವು ಕ್ರಮವನ್ನು ಕೈಗೊಳ್ಳುತ್ತೇವೆ.

ವಿಷಯ (ಥ) : ಕಾಪು ಕ್ಷೇತ್ರದಲ್ಲಿ ಕೈಗಾರಿಕಾ ಅಭಿವೃದ್ಧಿ ಬೋರ್ಡ್‌ನವರು ಸರ್ಕಾರಿ ಜಾಗವನ್ನು ಅಳತೆ ಮಾಡುತ್ತಿರುವ ಬಗ್ಗೆ

ಶ್ರೀ ಲಾಲಾಜಿ .ಆರ್. ಮೆಂಡನ್ (ಕಾಪು) : ಮಾನ್ಯ ಅಧ್ಯಕ್ಷರೆ, ಉಡುಪಿ ಜಿಲ್ಲೆ ಕಾಪು ಕ್ಷೇತ್ರದಲ್ಲಿ ಎಲ್ಲೂರು, ಮುದರುಗತಿ ಪರಿಸರದಲ್ಲಿ ಕಳೆದವಾರ ಅಲ್ಲಿ ಜನರ ವಿರೋಧ ಇದ್ದರೂ ಕೂಡ ಕೈಗಾರಿಕಾ ಡೆವಲಪ್‌ಮೆಂಟ್ ಬೋರ್ಡಿನವರು ಅಲ್ಲಿ ಜಾಗದ ಅಳತೆಯನ್ನು ಮಾಡಿದ್ದಾರೆ, ಖಾಸಗಿ ಮತ್ತು ಸರ್ಕಾರಿ ಎರಡು ಜಾಗಗಳನ್ನು ಅಳತೆ ಮಾಡಿದ್ದಾರೆ. ಉಡುಪಿ ಜಿಲ್ಲಾಧಿಕಾರಿ ಮತ್ತು ತಾಲ್ಲೂಕು ತಹಸೀಲ್ದಾರ್‌ರವರ ಮೂಲಕ ವಿನಂತಿಯನ್ನು ಮಾಡಿದರೂ ಕೂಡ ಅಲ್ಲಿ ವಿರೋಧದ ನಡುವೆ ಅಳತೆಯನ್ನು ಮಾಡಿದ್ದಾರೆ. ಅದರ ಬಳಕೆ ಜಿಲ್ಲಾಧಿಕಾರಿಗಳು ನಮಗೆ ಮಾಹಿತಿಯನ್ನು ನೀಡುವುವ ಬಗ್ಗೆ ಸಭೆ ಕರೆದಿದ್ದರು. ಕಳೆದ ಶನಿವಾರ ಸಭೆಯನ್ನು ಕರೆದಾಗ ಜಿಲ್ಲಾಧಿಕಾರಿಗಳೇ ಆ ಸಭೆಯಲ್ಲಿ ಇಲ್ಲದೆ ಜನರ ವಿರೋಧದಿಂದ ಆ ಸಭೆ ಮುಂದೂಡಲ್ಪಟ್ಟಿದೆ. ನಮ್ಮಲ್ಲಿ ಬರುವಂತಹ ಬೃಹತ್ ಕೈಗಾರಿಕೆಗಳಿಗೆ ಹಿಂದೆಯೂ ಕೂಡ ತುಂಬಾ ವಿರೋಧ ವಿತ್ತು. ಅಲ್ಲದೆ ಥರ್ಮಲ್ ಆಧಾರಿತ ವಿದ್ಯುತ್ ಉತ್ಪಾದನಾ ಘಟಕಗಳು ಬರುತ್ತದೆಂದು ಜನರಲ್ಲಿ ಹೆದರಿಕೆ ಇದೆ. ಹಾಗಾಗಿ ಅದರ ಬಗ್ಗೆ ಸರಿಯಾದಂತಹ ಮಾಹಿತಿಯೂ ಬೇಕಾಗಿದೆ. ಜನರ ವಿರೋಧ ಇದ್ದಾಗ ಕೂಡ ಇಂತಹ ಕೈಗಾರಿಕೆಗಳು ಬರುವುದು ಸಮಂಜಸವಲ್ಲವೆಂದು ನಮ್ಮ ಜನತೆಯ ವಾದವಾಗಿದೆ. ಅದರ ಬಗ್ಗೆ ಸರಿಯಾದಂತಹ ಮಾಹಿತಿಯನ್ನೂ ಕೊಡಬೇಕಾಗಿ ಸಂಬಂಧಪಟ್ಟ ಇಲಾಖೆಗೆ ಹಾಗೂ ಮಂತ್ರಿಗಳಿಗೆ ತಾವು ಸೂಚಿಸಬೇಕೆಂದು ಹಾಗೂ ಇದರ ಬಗ್ಗೆ ಇಲಾಖೆಯವರು ಮಾಹಿತಿ ನೀಡಬೇಕೆಂದು ನನ್ನ ವಿನಂತಿಯಗಿದೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮೊದಲೇ ಭೂಸ್ವಾಧೀನ ಪ್ರಕ್ರಿಯೆಯನ್ನು ಕೆಐಎಡಿಬಿಯವರು ಪ್ರಾರಂಭ ಮಾಡಿದ್ದರೆ ಅದರ ಬಗ್ಗೆ ಈಗಾಗಲೇ ಅದು ರಾಜ್ಯಪತ್ರದಲ್ಲಿ ಪ್ರಕಟಣೆಯಾಗಿರುತ್ತದೆ. ಅದರ ಬಗ್ಗೆ ಎಲ್ಲರಿಗೂ ಮಾಹಿತಿ ಬಂತು ಎಂದು ಅದರ ಅರ್ಥ. ಆದರೆ ಆ ವಿಚಾರದಲ್ಲಿ ವಿರೋಧಾಭಿಪ್ರಾಯಗಳು ಇದ್ದರೆ, ಯಾವ ಹಂತದಲ್ಲಿ ಆ ವಿರೋಧವನ್ನೂ ಪರಿಗಣಿಸಬೇಕು ಆ ವಿರೋಧದ ಹಂತ ಮೀರಿದ ನಂತರ ಅಧಿಕಾರಿಗಳಿಗೆ ಕೂಡ ಮತ್ತೆ ಅನೂರ್ಜಿತಗೊಳಿಸುವುದಕ್ಕಾಗಲಿ ಅಥವಾ ಅಧಿಕೃತವಾಗಿ ಘೋಷಿಸಿರುವಂತಹದ್ದನ್ನು ಕೈಬಿಡತಕ್ಕಂತಹ ಪ್ರಶ್ನೆಗೆ ಅದು ಮತ್ತೆ ಸರ್ಕಾರಕ್ಕೆ ಬರಬೇಕಾಗುತ್ತದೆ. ಆ ಕಾರಣಕ್ಕಾಗಿ ಮಾನ್ಯ ಶಾಸಕರು ನಿರ್ದಿಷ್ಟ ಪ್ರಕರಣದ ಬಗ್ಗೆ ಬರೆದು ಕಳುಹಿಸಿದರೆ ಇದರ ಬಗ್ಗೆ ಸಂಬಂಧಪಟ್ಟಂತಹ ಮಂತ್ರಿಗಳ ಗಮನಕ್ಕೆ ತಂದು ಆ ಅಧಿಕಾರಿಗಳ ಒಂದು ವರ್ತನೆಯಾಗಿರಬಹುದು, ಅಗತ್ಯತೆ ಅಥವಾ ಅನಗತ್ಯತೆ ಕುರಿತಾಗಿ ಸರ್ಕಾರ ಶೀಘ್ರವಾಗಿ ನಿರ್ಧಾರವನ್ನೂ ತೆಗೆದುಕೊಳ್ಳುವಾಗ